ಇರುವ ಕಾಲದಲ್ಲೂ ಒಂದು ನಿತ್ಯದ ಪರಿವರ್ತನೆ ಇದೆ. ಏಕತಾನತೆಯ ಬದಲಾವಣೆ ಮತ್ತು ಪರಿವರ್ತನೆಯ ಏಕತಾನತೆ ಜೊತೆಜತೆಗೆ ಸಾಗುತ್ತಿವೆ. ದಿನಾ ನೋಡುವ, ದಿನಾ ಬದಲಾಗುವ ನಮ್ಮ ವಿನೂನತ ಸುತ್ತಲಿಗೂ, ಅವೆಲ್ಲವನ್ನೂ ಜೀವಭಾವರಹಿತ ಚೌಕ ಕೋಣೆಯಲ್ಲಿ ಹಿಡಿದಿಡಲು ಯತ್ನಿಸುವ ಈ ಕ್ಯಾಲೆಂಡರಿಗೂ ಅಥವಾ ಅಂಥದೇ ಪ್ರಯತ್ನದಲ್ಲಿರುವ ಗಡಿಯಾರ ಇತ್ಯಾದಿ ಯಂತ್ರ ತಂತ್ರಗಳಿಗೂ ಎಲ್ಲಿಯ ಸಂಬಂಧ? ಎಂತಹ ಹೋಲಿಕೆ? ಕ್ಯಾಲೆಂಡರಿನ ಪುಟಗಳಲ್ಲಿ ಮುದ್ರಿತವಾದ ಅಂಕೆಗಳು ಅವುಗಳ ಮೇಲೆ ಕೆಳಗೆ ಬರೆಯಲಾದ ಊರೂರಿನ ಹಬ್ಬ, ರಜೆ, ಅಮಾವಾಸ್ಯೆ, ಹುಣ್ಣಿಮೆ ಇತ್ಯಾದಿ ವಿವರಗಳಿಗೂ, ಇಡೀ ಭೂಮಿ, ಆಕಾಶ, ನೀರು, ನಿಸರ್ಗ, ಖಗೋಳ, ನಕ್ಷತ್ರಮಂಡಲ, ಇತ್ಯಾದಿಗಳ ಅಸಾದೃಶ್ಯ ಸಾಂಗತ್ಯದಲ್ಲಿ ಬದಲಾಗುವ ಅನಂತ ಮಾಯಾಗಡಿಯಾರದ ಟಿಕ್ ಟಿಕ್ ಅನ್ನು ಅವ್ಯಾಹತವಾಗಿ ಕೇಳಿಸುತ್ತಾ ಕಣ್ಣೆದುರು ಬಿಡಿಸಲಾಗುವ ಸ್ಪರ್ಶ ಶಬ್ದಚಿತ್ರಕ್ಕೂ ಎಲ್ಲಿಯ ನಂಟು, ಸಾಮ್ಯತೆ?

ನಂಟು ಕಲ್ಪಿಸುವ ಪ್ರಯತ್ನದಲ್ಲಿರುವಾಗಲೇ ಕೊನೆಮೊದಲಿಲ್ಲದ ಅನೂಹ್ಯದಲ್ಲಿ ಲೀನವಾಗಿರುವ, ಆದರೆ ಕೈಯ ಮಣಿಗಂಟಿನ ಮೇಲೆ ಕಟ್ಟಿದ ಸಣ್ಣ ಗಡಿಯಾರ, ಗೋಡೆಯಲ್ಲಿ ನೇತು ಹಾಕಿದ ಕ್ಯಾಲೆಂಡರಿನ ಮೂಲಕವೇ ಜಗದ ಯುಗದ ಕಾಲವನ್ನು ತಿಳಿಯುವ ಅರಗಿಸಿಕೊಳ್ಳುವ ಹುಚ್ಚು ಸಾಹಸವನ್ನು ಬಿಡದ ಹುಲುಮನುಷ್ಯರೆಲ್ಲರೂ ಇದೀಗ ಅವರವರ ಪ್ರದೇಶ ಪ್ರಕೃತಿಗಳು ನೀಡಿದ ದಿನಮಾನದಲ್ಲಿ ವ್ಯಸ್ತರು; ಮತ್ತೆ ನನ್ನಂತಹ ಕೆಲವರು ಇಂಗ್ಲಿಷ್ ಚಳಿಗಾಲದಲ್ಲಿ. ಕಾಲದೊಟ್ಟಿಗೆ ಬದುಕುವ ಕಲೆಯ ಪರಿಚಯ ನಮಗೆಲ್ಲ ಹೊಸತಲ್ಲದಿದ್ದರೂ ಕಾಲದೊಳಗಿನ ವೈಪರೀತ್ಯವನ್ನು ಅರಗಿಸಿ ಕರಗಿಸಿಕೊಳ್ಳುವುದು ಈಗಲೂ ನಿತ್ಯನೂತನ ಸವಾಲು-ಸಿದ್ಧಿ. ಎಲ್ಲವೂ ಪ್ರತಿ ಗಳಿಗೆ ಬದಲಾಗುತ್ತಿದ್ದರೂ ಮತ್ತೆ ಬದಲಾವಣೆಯ ಪಾಠ ದಿನವೂ ನಿಚ್ಚಳವಾಗಿದ್ದರೂ, ಒಂದಷ್ಟು ಬದಲಾಗಲಿ ಎನ್ನುವುದು, ಇನ್ನೊಂದಷ್ಟು ಬದಲಾಗದೆ ಇರಲಿ ಎನ್ನುವುದು, ಮತ್ತೆ ಅವೆರಡಕ್ಕಾಗಿಯೂ ಶತಾಯ ಗತಾಯ ಹೋರಾಡುವುದು ನಮ್ಮ ಅನಿವಾರ್ಯತೆಯೋ ವ್ಯಸನವೋ ಮಿತಿಯೋ... ಕ್ಯಾಲೆಂಡರಿಗೂ ಅದು ಅಳೆದು ತಿಳಿಸಲು ಹೊರಟಿರುವ ಕಾಲಕ್ಕೂ ಎರಡಕ್ಕೂ ತಿಳಿದಿರಲಿಕ್ಕಿಲ್ಲ. ಪ್ರತಿವರ್ಷ ಬದಲಾಗುವ ಆದರೆ ಪ್ರತಿ ಬಾರಿಯೂ ಬಹುತೇಕ ಹಾಗೆ ಹಾಗೆ ಕಾಣುವ ಕ್ಯಾಲೆಂಡರು ಅದೆಷ್ಟೋ ಸಂವತ್ಸರಗಳನ್ನು ಮೇಲ್ನೋಟಕ್ಕೆ ನಮ್ಮ ಕೈಯ ಮೂಲಕವೇ ಬದಲಾಯಿಸಿದಂತೆ ಕಂಡರೂ, ಕಾಲವನ್ನು ಕೈಯಾರೆ ಹಿಂದೋ ಮುಂದೋ ಸಾಗಿಸಿದ ಹುಸಿ ಅನುಭವ ನಮಗೆ ಒದಗಿಸಿದರೂ ದಿನಾಂಕಕ್ಕಿಂತ ಹೊರತಾದ ಮಿಗಿಲಾದ ಬದಲಾವಣೆಗಳೆಲ್ಲವೂ ಈ ಹಾಳೆ ಮಗ್ಗುಲುಗಳ ಹೊರಗೇ ನಡೆಯುತ್ತಿರುವುದು. ಅಥವಾ ಕ್ಯಾಲೆಂಡರ್ ಮತ್ತು ಅದರ ಬೆನ್ನಿಗಿರುವ ಗೋಡೆಯ ನಡುವಿನ ಅವ್ಯಕ್ತ ಸಣ್ಣ ಅವಕಾಶದಲ್ಲಿ ಹುದುಗಿರುವುದು.

ಹಾಳೆಗಳಿಂದ ಹೊರಗೆ ಬಂದರೆ ಆಯಾ ಕಾಲದ ಮತ್ತು ಈ ಗಳಿಗೆಯ ಸನ್ನಿವೇಶ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಇರುವಾಗ ಭೂಮಧ್ಯ ರೇಖೆಯಿಂದ ತುಸು ದೂರ ಇರುವ ಉತ್ತರಾರ್ಧ ಗೋಳದ ವಾಸಿಗಳಾದ ನಾವೂ ಕಾಲಕ್ಕೆ ತಕ್ಕುದಾದ ಒಂದು ಸನ್ನಾಹದಲ್ಲಿದ್ದೇವೆ. ಇಡೀ ಇಂಗ್ಲಿಷ್ ಊರು-ದೇಶದ ಕಾತರಿಕೆಗೊಂದು ಹೊಸದಿಕ್ಕು ದೊರೆಯುವಂತೆ, ಕಾಲ್ಪನಿಕ ಕತೆ-ಕಾದಂಬರಿಗಳ ಪುಟಗಳ ಓದಿನಲ್ಲಿ ನಡುವೆ ಎದುರಾಗುವ ಅಕಸ್ಮಾತ್ ತಿರುವಿನಂತೆ, ಕತ್ತಲು ಚಳಿಗಳೇ ಆಳಿ ನಿಭಾಯಿಸುವ ತಿಂಗಳುಗಳಲ್ಲಿ ಕೋರೈಸುವ ಗೂಡುದೀಪವಾಗಿ ಕ್ರಿಸ್‌ಮಸ್ ಹಬ್ಬ ಬರುತ್ತದೆ. ಕತ್ತಲು, ಚಳಿ, ನಿರ್ಜರತೆಯನ್ನು ಮರೆತು ಜನರು ಉಲ್ಲಸಿತರಾಗುತ್ತಾರೆ. ಪ್ರತೀಕ್ಷೆಯ ಪ್ರತಿದಿನವನ್ನೂ ಕಲರವದಲ್ಲಿ ಕಳೆಯುತ್ತಾರೆ. ಪ್ರತಿಯಾಗಿ ಕ್ರಿಸ್‌ಮಸ್ ಹಬ್ಬವೂ ಇಂಗ್ಲಿಷ್ ಜನಮಾನಸದ ನೆಮ್ಮದಿ, ಹಾರೈಕೆ, ಜೀವನೋತ್ಸಾಹಗಳನ್ನು ಕಾಪಿಡುವ ಅದಮ್ಯ ಸಾಹಸವನ್ನು ಮಾಡುತ್ತದೆ.

ಚಿರಂತನ ನಿದ್ರೆಯಲ್ಲೋ ಆಲಸ್ಯದಲ್ಲೋ ಮಲಗಿದ ಕಾಲ ಒಮ್ಮೆ ಮೈಮುರಿದು ಆಕಳಿಸಿ ಬದಿ ಬದಲಿಸಿದಂತೆ ಇಂಗ್ಲಿಷ್ ವರ್ಷದ ಕಟ್ಟಕಡೆಯ ಮಗ್ಗುಲು ಡಿಸೆಂಬರ್ ಇದೀಗ ಎದುರಿಗಿದೆ. ಇನ್ನೇನು ಕಾಲಗಣನೆಯನ್ನು ಮುಗಿಸಿಯೇ ಬಿಡಲಿರುವ ಈ ವರ್ಷದ ಕ್ಯಾಲೆಂಡರಿನ ಹಾಳೆಗಳನ್ನು ಎತ್ತಿ ಅವಲೋಕಿಸಿದರೆ ಫೆಬ್ರುವರಿಯ ಬೆನ್ನಿಗೆ ನವೆಂಬರ್, ಮಾರ್ಚ್ ಮಗ್ಗುಲಿಗೆ ಅಕ್ಟೋಬರ್, ಏಪ್ರಿಲ್ ಹಿಂದೆ ಸೆಪ್ಟೆಂಬರ್, ಪ್ರತಿ